# ಸ್ಪಂದನಗಳಿಗೆ ಅಭಾವ, ನಿಶ್ಚಲಗೊಂಡಿತು ಜೀವ

ಕರಿಮಾಯಿ ಗುಡ್ಡದ ಕಾಡಿನ ಹಿನ್ನೆಲೆಯನ್ನು ಬಳಸಿಕೊಂಡು ದೀಪೂ ಕೂಡ ವಿವಿಧ ಭಂಗಿಗಳಲ್ಲಿ ಚಿತ್ರ ತೆಗೆಸಿಕೊಳ್ಳುತ್ತಿದ್ದ. ದೀಪೂವಿನ ಮಂಗಾಟದ ಚಿತ್ರ ತೆಗೆಯುವುದೆಂದರೆ ಶೀಲಾಳಿಗೂ ಆಸಕ್ತಿ. ಒಮ್ಮೆಯಂತೂ ಆತನ ಕುರುಚಲು ಗಡ್ಡಕ್ಕೆ ಸುಂದರ ಶೇವ್ ಕೊಟ್ಟು ಆಕೆಯ ಮುಂದೆ ನಿಂತ ಕ್ಷಣವನ್ನು ಕ್ಲಿಕ್ಕಿಸದೆ ಶೀಲಾಳಿಗೆ ಸಮಾಧಾನವೇ ಇರಲಿಲ್ಲ.

‘ಇನ್ನು ಬೆಳೆಸಬೇಡ್ವಾ ನಿನ್ನ ಕುರುಚಲು ಗಡ್ಡ. ಕಾಡುಪ್ರಾಣಿ ಥರ.’

‘ಯಾಕೆ ಅಮ್ಮಾವ್ರೆ?’

‘ನಿನಗದು ಹಿಡಿಸೋದಿಲ್ಲ. ಹೀಗೇ ಇರ್ಲಿ. ಕ್ಲೀನ್ ಶೇವ್.’

‘ನಿಮ್ಗೆ ಇಷ್ಟವಾದ್ರೆ ನಂಗೂ ಇಷ್ಟ. ಇನ್ಮುಂದೆ ಕ್ಲೀನ್ ಶೇವ್’, ಇಬ್ಬರೂ ನಕ್ಕು ಹಗುರಾದರು.

ಶೀಲಾಳಿಗಂತೂ ಆರಾಮ. ಯಾವ ಕ್ಷಣದಲ್ಲಿ ‘ದೀಪೂ’ ಎಂದರೂ ಆತ ಪ್ರತ್ಯಕ್ಷ. ಅದಕ್ಕೆ ಇದಕ್ಕೆ ಎಂದಿಲ್ಲ. ಸ್ನಾನಕ್ಕೆ ತೊಡಗಿದ ಶೀಲಾಳಿಗೆ ಮರೆತುಹೋದ ಟವೆಲ್ ತರುವುದಕ್ಕೋ ಒಳ ಉಡುಪುಗಳನ್ನು ತರುವುದಕ್ಕೋ ಆತ ಬೇಕು. ಅಂತಹ ಕೆಲಸಗಳೆಂದರೆ ಆತನಿಗೆ ಎಲ್ಲಿಲ್ಲದ ಕುತೂಹಲ. ಮೊದಲ ಬಾರಿಗೆ ಆಕೆಯ ಬೆನ್ನು ಉಜ್ಜಲು ಹೇಳಿದ ದಿನವಂತೂ ಆತನಿಗೆ ರೋಮಾಂಚಕ ಅನುಭವ. ಯಾವ ಕೆಲಸದಲ್ಲೂ ದೀಪೂ ಹಿಂದೆ ಬೀಳುವವನಲ್ಲ. ಬೆರಳು ತೋರಿಸಿದಾಗ ಹಸ್ತ ನುಂಗುವ ಹವಣಿಕೆ ಆತನಲ್ಲಿತ್ತು. ಸುಂದರಿಯಾದ ಶೀಲಾಳ ವ್ಯರ್ಥವಾಗಿ ಸೋರುವ ಯೌವನದ ಬಗ್ಗೆ ಅನೇಕ ಬಾರಿ ಆತ ತಲೆಕೆಡಿಸಿಕೊಂಡಿದ್ದ.

ನಮ್ಮ ಯಜಮಾನ್ರು ಯಾಕೆ ಹೀಗೆ? ಲ್ಯಾಬ್ ಸೇರಿದ್ರೆ ಮನೆಗೆ ಬರೋ ಚಿಂತೇನೇ ಇಲ್ಲ. ಮನೇಲೊಂದು ಚಂದದ ಬೊಂಬೆ ಆಭರಣ ಧರಿಸಿ, ಅಲಂಕಾರ ಮಾಡಿ ಬೆಳಗಿನಿಂದ ರಾತ್ರಿ ತನಕ ಕಾಯ್ತಾ ಕೂತಿರ್ತದೆ ಅನ್ನೋ ಪರಿಜ್ಞಾನಾನೇ ಇಲ್ಲ ಎಂದುಕೊಳ್ಳುತ್ತಿದ್ದ. ಜೊತೆಗೆ ಬೆಂಗಳೂರಿನ ಹೋಟೆಲಿನಲ್ಲಿದ್ದಾಗ ತಾನು ಪಡೆದ ಅನುಭವವೂ ಒಳಗೊಳಗೇ ದುಡಿಮೆಗೈಯುತ್ತಿತ್ತು. ತನಗೆ ಅನ್ನ ಕೊಟ್ಟವರಿಗೆ ಅನ್ಯಾಯವೆಸಗಬೇಕೆಂಬ ದುರುದ್ದೇಶವೂ ಅವನದಲ್ಲ. ಒಡತಿಯ ಪ್ರೀತಿಗಾಗಿ ಆತ ಏನು ಮಾಡುವುದಕ್ಕೂ ಸಿದ್ಧನಿದ್ದ. ಆಕೆ ಮ್ಲಾನವದನೆಯಾದ ಸಂದರ್ಭಗಳಲ್ಲಿ ಕೋತಿ ಕುಣಿತ ಮಾಡಿ ಆಕೆಯನ್ನು ನಗಿಸುತ್ತಿದ್ದ. ಆಕೆಯೊಳಗಿನ ಅವ್ಯಕ್ತ ನೋವಿಗೆ ನಗುವಿನ ತೇಪೆ ಹಚ್ಚುತ್ತಿದ್ದ.

ಅಂದು ದೀಪೂ ವೀರನಗರಕ್ಕೆ ಹೋಗಿದ್ದ. ಹಿಂದಿರುಗಿ ಬರುತ್ತಾ ಕೊಡವೂರಿನಲ್ಲಿ ಬಸ್ಸಿಳಿದು ಎಂದಿನಂತೆ ಗೂಡಂಗಡಿಯ ಪಕ್ಕದಲ್ಲಿರಿಸಿದ್ದ ಸೈಕಲ್ ತೆಗೆದುಕೊಳ್ಳಲೆಂದು ಹೋದ. ಯಾರೋ ಒಬ್ಬರು ಮೋಟಾರ್ ಬೈಕಿನವರು ‘ಪ್ರೊ. ಭಾಸ್ಕರ್‌ರ ಮನೆ ಎಲ್ಲಾಯಿತು?’ ಎಂದು ಕೇಳಿದರು, ಎಂದ ಅಂಗಡಿಯಾತ.

‘ಅದಕ್ಕೆ ನೀವೇನೆಂದ್ರಿ?’ ದೀಪೂ ಕೇಳಿದ.

‘ಭಗವತಿ ಎಸ್ಟೇಟಿನ ದಾರಿ ಹೇಳ್ಕೊಟ್ಟು ಕಳುಹಿಸಿದ್ದೇನೆ’ ಎಂದ.

ಒಡತಿ ಒಬ್ಬರೇ ಮನೆಯಲ್ಲಿದ್ದಾಗ ಯಾರಪ್ಪಾ ಬಂದರು ಎಂದುಕೊಳ್ಳುತ್ತ ದೀಪೂ ಜೋರಾಗಿ ಸೈಕಲ್ ತುಳಿಯುತ್ತ ಮನೆಗೆ ತಲುಪಿದ. ವ್ಯಕ್ತಿಯೊಬ್ಬ ಮುಂಬಾಗಿಲಿನಲ್ಲಿ ನಿಂತಿದ್ದ. ಶೀಲಾ ಹೊಸ್ತಿಲಲ್ಲಿ ನಿಂತು ಏನೋ ಗಟ್ಟಿಯಾಗಿ ಹೇಳುತ್ತಿದ್ದಳು. ದೀಪೂನ ಸೈಕಲ್ ಹತ್ತಿರ ಬರುತ್ತಿದ್ದಂತೆಯೆ ಆಕೆಯ ಮಾತುಗಳು ಸ್ಫುಟವಾದುವು.

‘ಯಾಕೆ ತೊಂದರೆ ಕೊಡ್ತೀಯಾ? ನನಗೆ ಮದುವೆ ಆಗಿದೆ ಅನ್ನೋ ತಿಳಿವಳಿಕೇನಾದ್ರೂ ಬೇಡ್ವೇ?’

‘ನೀನು ಮದುವೆ ಆಗು, ಆಗದೆ ಹೋಗು. ನನಗೇನೂ ಬಿದ್ದುಹೋಗಿಲ್ಲ. ನನಗೆ ಬೇಕು ಅಂದ್ರೆ ಬೇಕು, ಅಷ್ಟೆ. ನನ್ನ ತೀರ್ಮಾನದಲ್ಲಿ ಏನೂ ಬದಲಾವಣೆಯಿಲ್ಲ’ ಆತ ಅಷ್ಟೇ ದೃಢವಾಗಿ ಮಾತನಾಡುತ್ತಿದ್ದ.

‘ಈ ಕ್ಷಣ ಇಲ್ಲಿಂದ ಹೊರಟು ಹೋಗು, ಇಲ್ದೇ ಹೋದ್ರೆ ಪೊಲೀಸರಿಗೆ ಫೋನ್ ಮಾಡ್ತೇನೆ’ ಎಂದು ಹೇಳಿ ದಢಾರನೆ ಬಾಗಿಲು ಹಾಕಿದಳು.

‘ನೀನು ಅದೇನು ಮಾಡ್ತೀಯೋ ಮಾಡು. ಆದ್ರೆ ತಿಳ್ಕೊ, ನಾನು ಮತ್ತೆ ಬರ್ತೇನೆ. ಅಷ್ಟು ಸುಲಭದಲ್ಲಿ ಬಿಟ್ಟುಕೊಡೋನಲ್ಲ ನಾನು. ಅದು ನಿನಗೂ ಗೊತ್ತು. ಪೊಲೀಸ್ ಗಿಲೀಸ್ ಅಂದ್ರೆ ಅಷ್ಟೇನೆ’ ಹೊರಗಡೆಯಿಂದಲೇ ಬಡಬಡಿಸಿ ಮೆಟ್ಟಿಲಿಳಿಯಬೇಕಿದ್ದರೆ ಕೆಳಗಡೆ ದೀಪು! ಇಬ್ಬರೂ ಪರಸ್ಪರ ನೋಡಿದರು. ಯಾರೂ ಮಾತನಾಡಲಿಲ್ಲ. ಪವನ್ ಹಾಗೇನೇ ಹೊರಟುಹೋದ. ದೀಪೂ ತುಸುಹೊತ್ತು ಆತ ಹೋದ ಹಾದಿಯನ್ನೇ ದಿಟ್ಟಿಸುತ್ತಾ ನಿಂತ. ದೂರದಲ್ಲಿ ಬುಲೆಟ್ ಬೈಕು ಶೀಲಾಳ ಎದೆಯಲ್ಲೂ ಸದ್ದುಮಾಡುತ್ತ ಹೊರಟುಹೋಯಿತು.

9

ಪ್ರೊ. ಭಾಸ್ಕರ್ ಹಾಗೂ ಡಾ. ಗಣೇಶರ ನಡುವಣ ಪರಿಚಯ ಅವರು ಕೊಡವೂರಿಗೆ ಬಂದ ಮೇಲಂತೂ ಮತ್ತಷ್ಟು ಬಲಿಯಿತು. ಅವಕಾಶವಾದಾಗಲೆಲ್ಲ ಡಾ. ಗಣೇಶ್ ಭಗವತಿ ಎಸ್ಟೇಟಿಗೆ ಭೇಟಿ ನೀಡುವುದುಂಟು. ಕೆಲವೊಮ್ಮೆ ಮಧ್ಯರಾತ್ರಿಯವರೆಗೆ ನಡೆಯುತ್ತಿದ್ದ ಮೇಜವಾನಿಯಲ್ಲಿ ಶೀಲಾಳೂ ಭಾಗವಹಿಸುತ್ತಿದ್ದಳು. ಪ್ರೊ. ಭಾಸ್ಕರ್‌ರ ಮನೆಯಲ್ಲಿ ಡಾ. ಗಣೇಶ್‌ರನ್ನು ಹೊರತುಪಡಿಸಿ ಬೇರೆ ಯಾರ ಜೊತೆಗೂ ಮೇಜವಾನಿ ನಡೆಯುತ್ತಿರಲಿಲ್ಲ. ಅವರವರೇ ಕುಳಿತಾಗ ಎಷ್ಟೋ ವೇಳೆ ಶೀಲಾಳ ಬಗ್ಗೆ, ಆಕೆಯ ಭಯದ ಬಗ್ಗೆ, ಆಕೆಯ ಚಿನ್ನದ ಬಗ್ಗೆ ಮಾತು ಬರುವುದುಂಟು. ಮಾತಿನ ಮಧ್ಯೆ ಪವನ್ ಬಗ್ಗೆ ಸದಾ ಎಚ್ಚರವಾಗಿರುವಂತೆ ಡಾ. ಗಣೇಶ್ ಸೂಚ್ಯವಾಗಿ ಹೇಳಿದ್ದೂ ಉಂಟು.

‘ಈ ಕೋಟೆಯ ಒಳಗಡೆ ಯಾರೂ ಬರಲಾರರು. ಅಷ್ಟು ಬಂದೋಬಸ್ತ್ ಇಲ್ಲಿದೆ, ಅಲ್ವೇ ಶೀಲಾ?’ ಭಾಸ್ಕರ್ ಹೇಳಿದರು.

‘ಹಾಗಂತ ನನ್ನನ್ನು ಒಬ್ಬನ್ನೇ ಬಿಟ್ರೊ



